ಮೂಲ ದಾವಾ ನಂಃ92/14 ಪಿ ಡಬ್ಲುಃ 1

ಸಾಕ್ಷಿಯನ್ನು ದಿನಾಂಕಃ 25-02-2020 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀಸವಾಲುಃ ಶ್ರೀ ಎಸ್ ವಿ ಎ ವಕೀಲರಿಂದ

ನಾನು ಖರೀದಿ ಮಾಡಿದ ಆಸ್ತಿಯ ಸರ್ವೆ ನಂ 85. ಅದರ ಒಟ್ಟು ಕ್ಷೇತ್ರ ಈಗ ನನಗೆ ನೆನಪಿಲ್ಲ. ಅದರಲ್ಲಿ ಖರಾಬು ತೆಗೆದು ಉಳಿದ ಕ್ಷೇತ್ರದ ಪೈಕಿ ನಾನು7 ಗುಂಟೆ ಖರೀದಿ ಮಾಡಿದ್ದೇನೆ. ಖರಾಬು ಯಾವುದರ ಕುರಿತು ಇದೆ ಎಂಬ ಪ್ರಶ್ನೆಗೆ ಸಾಕ್ಷಿ ರಸ್ತೆ ಬಗ್ಗೆ ಇರಬಹುದು ಎನ್ನುತ್ತಾರೆ. ನಾನು ದಾವಾ ಆಸ್ತಿಯನ್ನು 2009 ರಲ್ಲಿ ಖರೀದಿಸಿರಬಹುದು. ದಾವಾ ಸರ್ವೆ ನಂ ಗೆ ಒಟ್ಟು ಎಷ್ಟು ಹಕ್ಕುದಾರರು ಇದ್ದರು ಎಂದು ನನಗೆ ಗೊತ್ತಿಲ್ಲ. ನಾನು ಖರೀದಿ ಮಾಡುವ ಕಾಲಕ್ಕೆ ಒಬ್ಬರೇ ಹಕ್ಕುದಾರರಿದ್ದರು. ಮೂಲ ಮಾಲೀಕರು ನನ್ನನ್ನು ಹೊರತುಪಡಿಸಿ ನನ್ನ ಜಾಗದ ಅಕ್ಕಪಕ್ಕ ಅಂದರೆ ಉತ್ತರಕ್ಕೆ ಹಾಗೂ ದಕ್ಷಿಣಕ್ಕೆ ಮತ್ತಿಬ್ಬರಿಗೆ ಜಾಗವನ್ನು ಮಾರಾಟ ಮಾಡಿದ್ದಾರೆ. ನನ್ನ ಜಾಗದ ಉತ್ತರದ ಕ್ಷೇತ್ರವನ್ನು ಪ್ರತಿವಾದಿ ಖರೀದಿ ಮಾಡಿದ್ದಾರೆ ಹಾಗೂ ನನ್ನ ದಕ್ಷಿಣದ ಗಡಿಯ ಲಗ್ತ ಇರುವ ಕ್ಷೇತ್ರವನ್ನು ನಾಗರಾಜ ನಾಯ್ಕ ಖರೀದಿ ಮಾಡಿದ್ದಾರೆ. ನಾನು ಜಾಗ ಖರೀದಿ ಮಾಡುವ ಕಾಲದಲ್ಲಿ ನಾಗರಾಜ ನಾಯ್ಕ ತಾನು 5 ಗುಂಟೆ ಕ್ಷೇತ್ರವನ್ನು ಖರೀದಿ ಮಾಡಿರುವುದಾಗಿ ಹೇಳಿದ್ದರು. ಪ್ರತಿವಾದಿ ಉತ್ತರದ ಕ್ಷೇತ್ರದಲ್ಲಿ 3 ಖರೀದಿ ಮಾಡಿರುತ್ತಾರೆ. ನಮಗೆ ಮಾರಾಟ ಮಾಡಿದ ಕ್ಷೇತ್ರವನ್ನು ಹೊರತುಪಡಿಸಿ ಉಳಿದ ಕ್ಷೇತ್ರವನ್ನು ಕೂಡ ಮೂಲ ಮಾಲೀಕರು ಬೇರೆ ಬೇರೆಯವರಿಗೆ ಮಾರಾಟ ಮಾಡಿರಬಹುದು. ನನಗೆ ಗೊತ್ತಿಲ್ಲ. ಖರೀದಿ ಮಾಡುವ ಕಾಲಕ್ಕೆ ಸರ್ವೆ ಮಾಡಿಸಿದ್ದರು. ಒಟ್ಟು ಕ್ಷೇತ್ರದ ಪೈಕಿ ನನ್ನ 7 ಗುಂಟೆ ಜಾಗ ದಾವಾ ಸರ್ವೆ ನಂ ನ ಉತ್ತರದ ದಿಕ್ಕಿನ 2 ನೇ ಭಾಗ ಆಗಿರುತ್ತದೆ. ಈಗ ನಾನು ಖರೀದಿ ಮಾಡಿದ 7 ಗುಂಟೆ ಜಾಗ ಖಾಲಿ ಇದೆ. ಖರೀದಿ ಮಾಡುವ ಕಾಲದಲ್ಲಿ ನಾನು ಪ್ರಭಾತನಗರದಲ್ಲಿ ಬಾಡಿಗೆ ಮನೆ ಮಾಡಿಕೊಂಡು ವಾಸವಾಗಿದ್ದೆ. ಖರೀದಿ ಮಾಡುವ ಕಾಲಕ್ಕೆ ದಾವಾ ಆಸ್ತಿ ಬಿನ್ ಶೇತ್ಕಿ ಆಗಿದ್ದರಿಂದ ನಾನು ಖರೀದಿ ಮಾಡಿದ್ದೆ. ನಾನು ಖರೀದಿ ಮಾಡುವ ಕಾಲಕ್ಕೆ ದಾಖಲೆಗಳಲ್ಲಿ ದಾವಾ ಆಸ್ತಿ ಬಿನ್ ಶೇತ್ಕಿ ಜಾಗ ಎಂದು ನಮೂದಿತ್ತು. ದಾವಾ ಆಸ್ತಿ ಬಿನ್ ಶೇತ್ಕಿ ಜಾಗ ಎಂದು ತೋರಿಸಲು ನನ್ನ ಬಳಿ ದಾಖಲೆ ಇದೆ. ನಾನು ದಾವಾ ಆಸ್ತಿ ಖರೀದಿ ಮಾಡಿದ ಸುಮಾರು ಒಂದೂವರೆ ವರ್ಷದ ನಂತರ ನಾಗರಾಜ ನಾಯ್ಕ ರವರು ತಾನು 5 ಗುಂಟೆ ಕ್ಷೇತ್ರವನ್ನು ದಾವಾ ಸರ್ವೆನಂ ನ ನನ್ನ ಜಾಗದ ದಕ್ಷಿಣದ ಗಡಿಯ ಲಗ್ತ ಇರುವ ಜಾಗವನ್ನು ಖರೀದಿ ಮಾಡಿರುವುದಾಗಿ ಹೇಳಿದ್ದರು. ಖರೀದಿ ಮಾಡಿದ ನಂತರ ವಾರಕ್ಕೊಮ್ಮೆ ಅಥವಾ ಬಿಡುವುದು ಸಿಕ್ಕಿದಾಗ ದಾವಾ ಆಸ್ತಿಗೆ ಭೇಟಿ ಕೊಡುತ್ತಿದ್ದೆ. ನನ್ನ ಕ್ಷೇತ್ರವನ್ನು ಇತರರ ಕ್ಷೇತ್ರದಿಂದ ಬೇರ್ಪಡಿಸಲು ಸುತ್ತಲು ತಂತಿ ಬೇಲಿ ಹಾಕಿದ್ದೆನು ಆದರೆ ಈಗ ಅದನ್ನು ತೆಗೆದು ಹಾಕಿದ್ದಾರೆ. ಆ ರೀತಿ ತಂತಿ ಬೇಲಿಯನ್ನು ಮಾಲೀಕರ ಸಮಕ್ಷಮ ನಾನೇ ಹಾಕಿದ್ದೇನೆ.

(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

ಸಹಿ/-

ಹೆಚ್ಚುವರಿ ಸಿವಿಲ್ ಜಡ್ಜ,ಹೊನ್ನಾವರ.